<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ. 4264/2023</u>

| | | | |
|---|---|---|---|
| ಹೆಸರು | : | ದೇವಿಕಾ ದೇವಿ ಎನ್ | ಸಿ .ಡಬ್ಲ್ಯೂ :1 |
| ಗಂಡನ ಹೆಸರು | : | ಮಂಜುನಾಥ | ಪಿ .ಡಬ್ಲ್ಯೂ : 1 |
| ವಯಸ್ಸು | : | 44 ವರ್ಷ | |
| ಉದ್ಯೋಗ | : | PI ಸೈಬರ್ ಪೊಲೀಸ್ ಠಾಣೆ , ಬೆಂಗಳೂರು | |
| ವಾಸಸ್ಥಳ | : | Bangalore. | |

ಸಾಕ್ಷಿಯನ್ನು ದಿಃ 07-04-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ಅಕ್ಟೋಬರ್ **2023** ರಿಂದ **15-02-2024** ರವರೆಗೆ ಗುಬ್ಬಿ ಪೊಲೀಸ್ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 02-10-2023 ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ -2 ರಿಂದ 4 ರವರೊಡನೆ ನಾನು ಗುಬ್ಬಿ ಪಟ್ಟಣದಲ್ಲಿ ಗಸ್ತಿನಲ್ಲಿದ್ದ ಸಮಯ ಗುಬ್ಬಿ KSRTC ಬಸ್ಸು ನಿಲ್ದಾಣದ ಪಕ್ಕದಲ್ಲಿರುವ ಲಕ್ಕಾಂಬ ಬಾರ್ ನ ಹಿಂಭಾಗದ ಖಾಲಿ ಜಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಬಗ್ಗೆ ಬಾತ್ಮೀದಾರರಿಂದ ಮಾಹಿತಿ ಬಂದಿತ್ತು . ಆ ನಂತರ ನಾವು ಸ್ಥಳದ ಕಡೆಗೆ ಹೋಗಿದ್ದ ಸ್ವಲ್ಪ ದೂರದಲ್ಲಿ ಜೀಪು ನಿಲ್ಲಿಸಿ ಮರೆಯಲ್ಲಿ ನಿಂತು ನೋಡಲಾಗಿ ಇಬ್ಬರು ವ್ಯಕ್ತಿಗಳು ಅಕ್ರಮವಾಗಿ ಮದ್ಯವಾನ್ನು ಮಾರಾಟ ಮಾಡುತ್ತಿದ್ದು ನಮ್ಮನ್ನು ನೋಡಿದ ಕೂಡಲೇ ಆರೋಪಿತರುಗಳು ಓಡಲು ಪ್ರಾರಂಭಿಸಿದರು . ಚಾಸಾ -2 ರವರು 1 ನೇ ಆರೋಪಿತರನ್ನು ಬೆನ್ನಟ್ಟಿ ಹಿಡಿದರು . ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತ ತನ್ನ ಹೆಸರು ಶಂಭು , ಬಿಹಾರ ಮೂಲದವನು , ಪ್ರಸ್ತುತ ಕೊಪ್ಪದಲ್ಲಿ ವಾಸಿಸುತ್ತಿದ್ದೇನೆ ಎಂದು ತಿಳಿಸಿದರು . ಓಡಿ ಹೋದ ಮತ್ತೊಬ್ಬ ವ್ಯಕ್ತಿಯ ಬಗ್ಗೆ ವಿಚಾರಿಸಲಾಗಿ ಆತನ ಹೆಸರು ಶ್ರೀನಿವಾಸ್ ಎಂದು ತಿಳಿಸಿದರು . 1 ನೇ ಆರೋಪಿತರ ಬಳಿ ಇದ್ದ ಬ್ಯಾಗ್ ನ್ನು ಪರಿಶೀಲಿಸಲಾಗಿ ಅದರಲ್ಲಿ 90 ML ನ ಸಿಲ್ವರ್ ಕಪ್ ಬ್ರ್ಯಾಂಡಿಯ 19 ಟೆಟ್ರಾ ಪ್ಯಾಕ್‌ಗಳು , 180 ML ನ 8 PM Whiskey 13 ಟೆಟ್ರಾ ಪ್ಯಾಕ್‌ಗಳು , 90 ML ನ 9 OC Whiskey ಪೌಚ್ ಗಳು , 90 ML ನ 14 ರಾಜ Whiskey ಪೌಚ್ ಗಳಿದ್ದವು . ಅವುಗಳೊಡನೆ 1 ನೇ ಆರೋಪಿತರನ್ನು ಠಾಣೆಗೆ ಕರೆತಂದು ಚಾಸಾ -10 ರವರ ಸಮಕ್ಷಮ ಹಾಜರುಪಡಿಸಿ ಆರೋಪಿತರ ವಿರುದ್ಧ ವರದಿಯನ್ನು ಸಲ್ಲಿಸಿ ಕ್ರಮ ಕೈಗೊಳ್ಳಲು ಕೋರಿದ್ದೇನೆ .

ಸಾಕ್ಷಿಗೆ ವರದಿಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -1 ಎಂದು ಸಾಕ್ಷಿ ಸಹಿಯನ್ನು ನಿಪಿ -1 (ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ನಾಲ್ಕು ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ತೋರಿಸಲಾಗಿ ಅವುಗಳನ್ನು ಗುರುತಿಸಿದ್ದಾರೆ ಅವುಗಳನ್ನು ಒಟ್ಟಾಗಿ ಮು ಮಾ -1 ಎಂದು ಗುರುತಿಸಲಾಯಿತು .

ಆರೋಪಿತರುಗಳನ್ನು ನೋಡಿದರೆ ಗುರುತಿಸುತ್ತೇನೆ . ನ್ಯಾಯಾಲಯದಲ್ಲಿ ಹಾಜರಿರುವ 2 ನೇ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ .1 ನೇ ಆರೋಪಿತರು ಮರಣ ಹೊಂದಿದ್ದಾರೆ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-</u>

ಮೇಲೆಹೇಳಿದಂತೆ ಬಾತ್ಮೀದಾರರಿಂದ ಮಾಹಿತಿ ಬಂದಾಗ ಎಲ್ಲಿ ಗಸ್ತು ಮಾಡುತ್ತಿದ್ದಿರಿ ಎಂದರೆ ಸಾಕ್ಷಿಯು ನಿಖರ ಸ್ಥಳ ಹೇಳಲಾಗುವುದಿಲ್ಲ , ಗುಬ್ಬಿ ಪಟ್ಟಣದಲ್ಲಿ ವಾಹನದ. ಹೋಗುತ್ತಿರುವಾಗ ಮಾಹಿತಿ ಬಂತು ಎಂದು ತಿಳಿಸಿದ್ದಾರೆ . ನಿಪಿ -1 ರಲ್ಲಿ ನೀವು ವಶಪಡಿಸಿಕೊಂಡಿದ್ದೇವೆ ಎಂದು ಹೇಳುವ ಮದ್ಯದ ಕಂಪನಿಯ ನಿಖರ ವಿವರಗಳನ್ನು ಬರೆದಿಲ್ಲ ಎಂದರೆ ಸರಿ . ನಾನು ಹೇಳುವಂತೆ ಯಾವುದೇ ದಾಳಿ ನಡೆಸಿ ಮೇಲೆ ಹೇಳಿದಂತಹ ಕಂಪನಿಯ ಮದ್ಯದ ಟೆಟ್ರಾ ಪ್ಯಾಕ್ ಗಳನ್ನು ವಶಪಡಿಸಿಕೊಂಡಿಲ್ಲದ ಕಾರಣ ವಿವರಗಳನ್ನು ನಿಪಿ -1 ರಲ್ಲಿ ಬರೆದಿಲ್ಲ ಎಂದರೆ ಸಾಕ್ಷಿಯು ಕಣ್ತಪ್ಪಿನಿಂದ ನಮೂದಾಗಿಲ್ಲ , ಆದರೆ 6 ಲೀಟರ್ ಗಿಂತ ಹೆಚ್ಚಿನ ಮದ್ಯವೆಂದು ಬರೆಯಲಾಗಿದೆ ಎಂದು ತಿಳಿಸಿದ್ದಾರೆ .

ನಾನು ಹೇಳುವಂತೆ ನಾನು ಯಾವುದೇ ದಾಳಿ ನಡೆಸಿಲ್ಲ , ಠಾಣಾ ಅಂಕಿ ಅಂಶಗಳ ಹೆಚ್ಚುವರಿಗಾಗಿ ಆರೋಪಿತರ ವಿರುದ್ಧ ಸುಳ್ಳು ವಿವರಗಳ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಮೇಲೆ ಹೇಳಿದ ಯಾವುದೇ ಟೆಟ್ರಾ ಪ್ಯಾಕ್ ಗಳನ್ನು ನಾನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ .ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಬ್ಯಾಗ್ ವೊಂದರಲ್ಲಿ ಮದ್ಯದ ಪೌಚ್ ಗಳನ್ನು ಇಟ್ಟುಕೊಂಡಿದ್ದರೆಂದು ತಿಳಿಸಿದ್ದು ಸದರಿ ಬ್ಯಾಗ್ ನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲದಿರುವುದು ನಿಜ, ಆದರೆ ನಾನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದೆ ಎಂದು ತಿಳಿಸಿದ್ದಾರೆ . ಮು ಮಾ -1 ನ್ನು ನ್ಯಾಯಾಲಯದಲ್ಲಿ ಇದೇ ಮೊದಲ ಬಾರಿ ನೋಡುತ್ತಿದ್ದೇನೆ , ಅದನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ . ಆರೋಪಿತರನ್ನು ಇದೇ ಮೊದಲ ಬಾರಿ ನೋಡುತ್ತಿದ್ದೇನೆ , ಈ ಹಿಂದೆ ನೋಡಿಲ್ಲ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.